**ಸೇಡಂ ತಾಲ್ಲೂಕಿನಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವುದು**

1175 ( 1384) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ ( ಸೇಡಂ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ವಿದ್ಯುತ್ ಉಪ ವಿಭಾಗದವರು 1999-2000, 2000-2001ನೇ ಸಾಲಿನಲ್ಲಿ ಹರಿಜನ ಬಸ್ತಿಗಳಿಗೆ ಹಾಗೂ ಹೊಸ ಬಡಾವಣೆಗಳಿಗೆ ಯಾವ ಯಾವ ಗ್ರಾಮಗಳಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ, ಗ್ರಾಮವಾರು ವಿವರ ನೀಡುವುದು.

ಆ) ಇನ್ನೂ ಯಾವ ಯಾವ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

ಇ) ಸೇಡಂ ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಹೊಸ ಬಡಾವಣೆಗಳಿಗೆ, ಹೊಸ ಹರಿಜನ ಬಸ್ತಿಗಳಿಗೆ ವಿದ್ಯುತ್ ಸಂಪರ್ಕ ಇಲ್ಲವೆಂಬುದು ಆಯಾ ಗ್ರಾಮಗಳಿಗೆ ಭೇಟಿ ನೀಡಿದಾಗ, ಒಸತು ಆಕ್ಷೇಪಣೆ ಮಾಡುವುದು ನಿಜವಲ್ಲವೇ?

ಈ) ಈ ಉಳಿದಿರುವ ಹೊಸ ಹರಿಜನ ಬಸ್ತಿಗಳಿಗೆ, ಹೊಸ ಬಡಾವಣೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?

ಶ್ರೀ ವೀರಕುಮಾರ ಅ ಪಾಟೀಲ್ ( ಇಂಧನ ರಾಜ್ಯ ಸಚಿವರು)

ಅ) ವಿವರಗಳನ್ನು ಅನುಬಂಧ ( ಆ) ದಲ್ಲಿ ಒದಗಿಸಲಾಗಿದೆ.

ಆ) ವಿವರಗಳನ್ನು ಅನುಬಂಧ ( ಆ) ನಲ್ಲಿ ಒದಗಿಸಲಾಗಿದೆ.

ಇ) ಈ ವಿಷಯದಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯಿತಿಗಳೂ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ಮನವಿಗಳನ್ನು ಸಲ್ಲಿಸಬೇಕಾಗಿರುವುದು ಮನವಿಗಳನ್ನು ಸ್ವೀಕರಿಸುವ ನಂತರವೇ, ಹೊಸದಾಗಿ ಅಥವಾ ಹೆಚ್ಚುವರಿಯಾಗಿ ಬೀದಿ ದೀಪಗಳನ್ನು ಒದಗಿಸುವ ವಿಷಯದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಮುಂದಿನ ಸೂಕ್ಷ್ಮ ಕ್ರಮಗಳನ್ನು ತೆಗೆದು ಕೊಳ್ಳುತ್ತದೆ.

ಈ) ಗ್ರಾಮೀಣ ವಿದ್ಯುದೀಕರಣ ನಿಗಮದ ಯೋಜನೆಯಡಿಯಲ್ಲಿ ವಿದ್ಯುದೀಕರಣಕ್ಕಾಗಿ ಬಾಕಿ ಉಳಿದಿರುವ 22 ಹರಿಜನ ಬಸ್ತಿ;ಆಶ್ರಯ ಕಾಲೋನಿಗಳಿಗೆ ಮುಂಬರುವ 2 ವರ್ಷಗಳಲ್ಲಿ ಹಂತ ಹಂತವಾಗಿ ವಿದ್ಯುತ್ ಸಂಪರ್ಕ ಒದಗಿಸುವ ಕಾರ್ಯವನ್ನು ಕೈಗೊಳ್ಳಲು ಉದ್ದೇಶಿಸಿದೆ.

ಅನುಬಂಧ-ಅ

ಸೇಡಂ ತಾಲ್ಲೂಕಿನಲ್ಲಿ ವಿದ್ಯುದೀಕರಣಕ್ಕಾಗಿ ಗ್ರಾಮೀಣ ವಿದ್ಯುದೀಕರಣ ನಿಗಮದ ಯೋಜನೆಯಡಿ ಮಂಜೂರಾತಿ ದೊರೆತಿದ್ದು, ವಿದ್ಯುತ್ ಸಂಪರ್ಕ ಕಲ್ಪಿಸಬೇಕಾಗಿರುವ ಹರಿಜನ ಬಸ್ತಿ : ಆಶ್ರಯ ಕಾಲೋನಿಗಳ ಗ್ರಾಮವಾರು ವಿವರಗಳು.

| ಕ್ರಮ ಸಂಖ್ಯೆ | ಗ್ರಾಮದ ಹೆಸರು | | ಷರಾ |
|---|---|---|---|
| 1 | 2 | 3 | 4 |
| 1. | ಅನಂತಪೂರು | ಹರಿಜನಬಸ್ತಿ | ಕೆಲಸಪ್ರಗತಿಯಲ್ಲಿದೆ. |
| 2. | ಬನ್ನೂರ್ | " | " |
| 3. | ಮದನಾ | " | " |
| 4. | ಲಿಂಗಮಪಲ್ಲಿ | " | " |
| 5. | ಗೌದಹಳ್ಳಿ | " | " |
| 6. | ಹಲಳ | " | " |
| 7. | ಮೇಡಕ | " | " |
| 8. | ಮುಧೋಳ | " | " |
| 9. | ಸೋಲಾರ ಕೋಟ | " | " |
| 10. | ಬಿಜವಹಳ್ಳಿ | " | ಕೆಲಸವನ್ನು ಕೈಗೆತ್ತಿಗೊಳ್ಳಬೇಕಾಗಿದೆ. |
| 11. | ಕೋರನಳ್ಳಿ | " | " |
| 12. | ಪಂಗಸಳ್ಳಿ | " | " |
| 13. | ಬೊಮ್ಮನಳ್ಳಿ | ಆಶ್ರಯ ಕಾಲೋನಿ | " |
| 14. | ವೆಂಕಟೇಶನಗರ ತಾಂಡಾ | ಹರಿಜನಬಸ್ತಿ | " |
| 15. | ಬೀರಸಳ್ಳಿ | " | " |
| 16. | ಕುರಕುಂಟಾ | " | " |
| 17. | ಕೃಷ್ಣಸಿಂಗ್ ತಾಂಡಾ | " | " |
| 18. | ದುಲಕ್ಷೀಶ ಸ್ವೇಷನ್ ತಾಂಡಾ | " | " |

| 1 | 2 | 3 | 4 |
|---|---|---|---|
| 19. | ಬಿಚ್ಚಲೆ | ಹರಿಜನಬಸ್ತಿ | ಕೆಲಸವನ್ನು ಕೈಗೆತ್ತಿಗೊಳ್ಳಬೇಕಾಗಿದೆ. |
| 20. | ಮೀರಾಪಾಬಳ | '' | '' |
| 21. | ಕಿಬ್ಬದೂರಾ | ಆಶ್ರಯ ಕಾಲೋನಿ | '' |
| 22. | ಕುಕುಂಟಾ | '' | '' |

**ಅನುಬಂಧ-ಆ**

ವಿಧಾನ ಸಭೆ ಸದಸ್ಯರಾದ ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1384 ರ ಅನುಬಂಧ-ಆ :-

**ಸೇಡಂ ತಾಲ್ಲೂಕಿನಲ್ಲಿ 1999-2000 ಮತ್ತು 2000-2001 ರ ಸಾಲುಗಳಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುವ ಹರಿಜನ ಬಸ್ತಿಗಳ ಗ್ರಾಮವಾರು ವಿವರಗಳು.**

ಗ್ರಾಮದ ಹೆಸರು

1. ಅಡಿಕಿ

2. ರಂಜೋಳ

3. ಪುರಾಪಲ್ಲೆ

4. ಜಿಟಕಪಲ್ಲಿ

5. ಕೊಡಲಾ

6. ಯಗಸೂರ

**ರೈತರಿಗೆ ನೀರಾವರಿ ಅನುಕೂಲ ಮಾಡಿಕೊಡುವುದು**

1177 ( 1388) ಶ್ರೀ ಬಸವಂತರೆಡ್ಡಿ ಪೋತಕಪಲ್ಲಿ ( ಸೇಡಂ) : ಮಾನ್ಯ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಇಟ್ಕಾಲ್ ಉರ ಕೆರೆಯ ವ್ಯಾಪ್ತಿಯಲ್ಲಿ ನೀರಾವರಿ ಅಚ್ಚುಕಟ್ಟು ಇರುವುದು ಎಷ್ಟು : ಈಗ ಸದ್ಯಕ್ಕೆ ನೀರಾವರಿಯಾಗುವ ಎಕರೆಗಳೆಷ್ಟು;

ಆ) ಕೆಲ ಭೂ ಮಾಲೀಕರು ತಮ್ಮ ಭೂಮಿ ಕೆರೆಯ ಒಳಗೆ ಮುಳುಗಿ ಹೋಗಿರುವುದರಿಂದ ಇದರ ಕೋಡಿಯ ಒಂದು ತರಹವನ್ನು 8- 10 ವರ್ಷಗಳ ಹಿಂದೆ ಕಿತ್ತು ಹಾಕಿರುವುದರಿಂದ ಬಡ ಹರಿಜನರ ಭೂಮಿಗೆ ನೀರು ಸರಬರಾಜು ಗಡೇ ನಷ್ಟ ಹೊಂದುತ್ತಿರುವುದು ನಿಜವಲ್ಲವೆ;